ಪಿಡಬ್ಲ್ಯೂಃ 1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ **14-01-2026**

<u>ಮುಂದುವರಿದ ಪಾಟೀ ಸವಾಲು</u> ಃ 1 ಮತ್ತು 2 ನೇ ಪ್ರತಿವಾದಿಗಳ ಪರಃ ಶ್ರೀ ಆರ್.ಎಮ್. ವಕೀಲರಿಂದಃ

ನಮ್ಮ ಜಾಗದ ಪೂರ್ವ ದಿಕ್ಕಿನಲ್ಲಿ ಸರ್ವೇ ನಂಬರ್ 608/1, 2, 3 ಜಾಗ ಇದೆ. ಅಲ್ಲದೆ ಇತರ ಜನರು ಕೂಡಾ ಜಾಗ ಹೊಂದಿದ್ದಾರೆ ಎಂದರೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸಿದ ದಿನದಿಂದ ಅಲ್ಲಿಯೇ ವಾಸ ಮಾಡುತ್ತಿದ್ದೇನೆ. ನಿಪಿ-11 ನಕ್ಷೆ ಆಗುವಾಗ ಸರ್ವೇ ನಂಬರ್ 608 ರಲ್ಲಿ ವಾಸ್ತವ್ಯ ಇರುವವರು ಕೂಡಾ

ಹಾಜರಿರಬೇಕು ಎಂಬುದು ನನ್ನ ಅಪೇಕ್ಷೆಯಾಗಿತ್ತು. ಸರ್ವೇ ನಂಬರ್ 608 ರಲ್ಲಿ ವಾಸ್ತವ್ಯ ಇರುವವರು ವಿವಾದಿತ ರಸ್ತೆಯನ್ನು ಉಪಯೋಗ ಮಾಡಿಕೊಂಡು ಬರುವಂತಹ ವ್ಯಕ್ತಿಗಳು ಎಂದರೆ ಅಲ್ಲಿ ರಸ್ತೆಯೇ ಇರಲಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಸರ್ವೇ ನಂಬರ್ 608 ರಲ್ಲಿ ವಾಸ್ತವ್ಯದ ಮನೆಗಳು ಇದ್ದವು ಎಂದರೆ ಸರಿಯಲ್ಲ. ನನ್ನ ಜಾಗದ ಬದಿಯಲ್ಲಿ ಸುಶೀಲ ಮೂಲ್ಯರವರ ಒಂದು ಮನೆ ಮಾತ್ರ ಇತ್ತು.

ದಿಃ 16-01-2022 ರಂದು ಯಾವ ಇಲಾಖೆಯವರು ಯಾವ ಅನುದಾನದಿಂದ ರಸ್ತೆ ಮಾಡಿರುತ್ತಾರೆ ಎಂದು ನನ್ನ ಬಳಿ ದಾಖಲೆ ಇರುವುದಿಲ್ಲ. ಮುಂದುವರಿದು ಸದ್ರಿ ದಿನ ಪಿ.ಡಿ.ಓ ಹಾಗೂ ಪಂಚಾಯತು ಸದಸ್ಯರು ಜೆ.ಸಿ.ಬಿ ತೆಗೆದುಕೊಂಡು ಬಂದು ರಸ್ತೆ ಮಾಡಿರುತ್ತಾರೆ. ಬಲವಂತವಾಗಿ ನನ್ನ ಜಾಗದಲ್ಲಿ ರಸ್ತೆ ಮಾಡಿದ್ದಾರೆ ಎಂದು ಪೋಲಿಸರಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಇಲ್ಲ. ಮುಂದುವರಿದು ಪಿ.ಡಿ.ಓ ರವರು ನನಗೆ ಸರ್ವೇ ಮಾಡಿಸಲು ಹೇಳಿರುತ್ತಾರೆ. ನಿಪಿ-5 ರಂತೆ ನಿಟ್ಟೆ ಗ್ರಾಮ ಪಂಚಾಯತು ರವರು ಊರ್ಜಿತ ಇರುವ ರಸ್ತೆ ಯನ್ನು ರಿಪೇರಿ ಮಾಡಿರುವುದಾಗಿ ಹಾಗೂ ಸದ್ರಿ ರಸ್ತೆ ನಾನು ಜಾಗ ಖರೀದಿಸುವ ಪೂರ್ವದಿಂದಲೂ ಇದೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-5 ದಾಖಲೆಯನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

ದಾವೆ ಮಾಡುವ ಪೂರ್ವದಲ್ಲಿ ನಾನು ಕರ್ನಾಟಕ ಗ್ರಾಮ ಮೂಲ ಸೌಲಭ್ಯ ಮತ್ತು ಅಭಿವೃದ್ಧಿ ಇಲಾಖೆ ಮಣಿಪಾಲ್ ರವರಿಗೆ ನೋಟೀಸು ನೀಡಿರುವುದಿಲ್ಲ. ಅದೇ ರೀತಿ 2017 ರಿಂದ 2022 ರವರೆಗೆ ಯಾವುದೇ ಇಲಾಖೆಗೆ ನೋಟೀಸು ನೀಡಿರುವುದಿಲ್ಲ ಎಂದರೆ ಸರಿ. ಮುಂದುವರಿದು 2022 ರಲ್ಲಿ ರಸ್ತೆ ಮಾಡಿರುತ್ತಾರೆ ಆ ಸಮಯದಲ್ಲಿ ನೋಟೀಸು ನೀಡಿರುತ್ತೇನೆ. ವಿವಾದಿತ ರಸ್ತೆ 2017-2018 ರಲ್ಲಿ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ಉತ್ತರದಲ್ಲಿ ಇರುವ ರಸ್ತೆ ಎಷ್ಟು ಉದ್ದ ಇದೆ ಎಂದರೆ ಗೊತ್ತಿಲ್ಲ. ಸದ್ರಿ ರಸ್ತೆ ಮಾಡಲು ಸುಮಾರು 15-20 ಲಕ್ಷ ಖರ್ಚಾಗುತ್ತದೆ ಎಂದರೆ

ಗೊತ್ತಿಲ್ಲ. ವಿವಾದಿತ ರಸ್ತೆ ಕರ್ನಾಟಕ ಗ್ರಾಮ ಮೂಲ ಸೌಲಭ್ಯ ಮತ್ತು ಅಭಿವೃದ್ಧಿ ಇಲಾಖೆರವರು ರೂ.3,00,000/- ವೆಚ್ಚದಲ್ಲಿ 2017-2018 ರಲ್ಲಿ ರಿಪೇರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರಿದು ಅಲ್ಲಿ ರಸ್ತೆಯೇ ಇರಲಿಲ್ಲ. ಇದ್ದ ರಸ್ತೆಗೆ ಕಾಂಕ್ರೀಟ್ ಹಾಕಿ, ರಿಪೇರಿ ಮಾಡಲಾಗಿದ್ದು, ಹೊಸದಾಗಿ ರಸ್ತೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನುಜಾಗ ಖರೀದಿ ಮಾಡುವ ಪೂರ್ವದಲ್ಲಿಯೇ ಕಚ್ಚಾ ರಸ್ತೆ ಇತ್ತು ಎಂದರೆ ಸರಿಯಲ್ಲ. ವಿವಾದಿತ ರಸ್ತೆಯ ಸುತ್ತ-ಮುತ್ತಲಿನವರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ವಿವಾದಿತ ರಸ್ತೆ ಹೊರತುಪಡಿಸಿ, ಅದರ ಸುತ್ತ-ಮುತ್ತಲಿನವರಿಗೆ ಬೇರೆ ರಸ್ತೆ ಇಲ್ಲ ಎಂದರೆ ಅವರ ಜಾಗ ಇದೆ.

ಪಾಟೀ ಸವಾಲು : 4 ನೇ ಪ್ರತಿವಾದಿ ಪರಃ ಮಾನ್ಯ ಸರ್ಕಾರಿ ವಕೀಲರು ಶ್ರೀ ಆರ್.ಎಮ್ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ